ನರದತ್ತನಿಗೆ, 'ನಿನಗಿನ್ನೂ ಆಯುಷ್ಯವಿದೆ. ನೀನು ಈ ಮಹಾಪುರುಷನಿಗೆ ಶರಣಾಗು. ಸುಖ, ಶಾಂತಿ, ನೆಮ್ಮದಿ, ಸಂತೃಪ್ತಿ, ಸಮೃದ್ಧಿ ನಿನ್ನದಾಗುತ್ತದೆ' ಎಂದು ಹೇಳಿದರು. ಪಕ್ಕದಲ್ಲೇ ಅಸ್ವಸ್ಥಳಾಗಿ ಮಲಗಿದ್ದ ಬಾಣಂತಿಯನ್ನು ತೋರಿಸಿ, 'ಶೀಘ್ರ ಗುಣಮುಖಳಾಗುವಂತೆ ಆಶೀರ್ವದಿಸಿ ಗುರುಗಳೇ' ಎಂದೆ. ಮಹಾಮಾಯೆಯ ಮುಖವನ್ನೊಮ್ಮೆ ನೋಡಿ, ತಥಾಸ್ತು ಎನ್ನುವಂತೆ ದೂರದಿಂದಲೇ ಕೈ ತೋರಿ ಆಶೀರ್ವದಿಸಿ, 'ಮಹಾಪುರುಷನಿಗೆ ಜನ್ಮವಿತ್ತಿರುವೆ. ನಿನ್ನ ಜನ್ಮ ಸಾರ್ಥಕವಾಯಿತು' ಎಂದು ಆಶೀರ್ವಾದ ಮಾಡಿ, ನಿರ್ಗಮಿಸಿದರು.

ಅಂಥ ಮಹಾಪುರುಷನಂಥ ಮಗನನ್ನು ಹೆತ್ತ ಮಾಯಾದೇವಿಯ ಬಗೆಗೂ ನನಗೆ ಅತೀವ ಅಭಿಮಾನ ತುಂಬಿ ಬಂತು. ಮಾಯಾ ತನ್ನ ಹೆಸರಿನಂತೆಯೇ ನನ್ನ ಜೀವನದಲ್ಲಿಯೂ ಮಾಯಾಳೇ ಆಗಿದ್ದಳು. ಅಂಥ ಅನುರೂಪ ಸುಂದರಿಯನ್ನು ನಾನು ಅದುವರೆಗೂ ಕಂಡೇ ಇರಲಿಲ್ಲ. ಸ್ವರ್ಗಲೋಕದ ಅಪ್ಸರೆಯರನ್ನಂತೂ ನಾನು ನೋಡಿರಲಿಲ್ಲ, ಆದರೆ ಅವರನ್ನು ವರ್ಣಿಸುತ್ತಾರಲ್ಲ, ಹಾಗಿದ್ದಳು. ಆಕೆಯ ಮನಸ್ಸಿನಾಳದ ಸುಕೋಮಲ ಸೌಂದರ್ಯವನ್ನೂ ನನಗೆ ಎಂದೂ ಅಳೆಯಲಾಗಿರಲಿಲ್ಲ. ಅಂಥ ಧರ್ಮಿಷ್ಠೆ, ಸದ್ಗುಣ ಸಂಪನ್ನೆಯನ್ನು ನಾನು ಅದುವರೆಗೂ ಕಂಡೇ ಇರಲಿಲ್ಲ. ಆಂತರಿಕ ಮತ್ತು ಬಾಹ್ಯ ಸೌಂದರ್ಯಗಳೆರಡೂ ತುಂಬಿ ತುಳುಕುವಂತೆ ಆವಿರ್ಭವಿಸಿದ ಅದ್ಭುತ ಜೀವ ಆಕೆಯದು. ಆಕೆ ನನ್ನ ಜೀವನಕ್ಕೆ ಕಾಲಿಟ್ಟಾಗಿನಿಂದ ಎಂಥ ಸೌಭಾಗ್ಯ ನನ್ನ ಪಾಲಿಗೆ ತುಂಬಿ ಬಂತು! ರಾಜ್ಯದ ಎಲ್ಲೆಯೂ ವಿಸ್ತರಿಸಿತು, ಬೊಕ್ಕಸವೂ ತುಂಬಿತು. ಅದೆಲ್ಲಕ್ಕಿಂತಲೂ ಮುಖ್ಯವಾಗಿ ನನ್ನ ಜೀವನವೇ ತುಂಬಿ ಬಂದಂಥ ಸಂತೃಪ್ತ ಭಾವನೆ ನನ್ನನ್ನು ಆವರಿಸಿತ್ತು. ಎಂಥ ಬಲಶಾಲಿ ರಾಜರು ನಮ್ಮ ಮೇಲೆ ದಂಡೆತ್ತಿ ಬಂದರೂ ಅವರನ್ನು ನಿಗ್ರಹಿಸಿಬಿಡಬಲ್ಲಷ್ಟು ಧೈರ್ಯ, ಸ್ಥೈರ್ಯ, ಆತ್ಮವಿಶ್ವಾಸ ನನ್ನಲ್ಲಿ ತುಂಬಿ ಬಂದಿತ್ತು. ಆದರೆ ನಾನಾಗಿಯೇ ಎಂದೂ ಯಾರ ಮೇಲೂ ದಂಡೆತ್ತಿ ಹೋದವನಲ್ಲ. ಎಲ್ಲವೂ ಆಕೆಯ ಕಾಲ್ಗುಣದಿಂದ ತಾನಾಗಿಯೇ ನನಗೆ ಒಲಿದು ಬರುತ್ತಿತ್ತು.

ಆಕೆಯನ್ನು ಮದುವೆಯಾಗಿ ಅದೆಷ್ಟೋ ವರ್ಷ ನಮಗೆ ಮಕ್ಕಳೇ ಆಗಿರಲಿಲ್ಲ. ಬಾಹ್ಯ ಸಂಪರ್ಕದಿಂದ ಮಾತ್ರ ಮಕ್ಕಳಾಗುತ್ತಾವೆಂದು ಭಾವಿಸಿದ್ದಂಥ ಮುಗ್ಧ ನಾನು. ಅದಕ್ಕಿಂತಲೂ ಮುಖ್ಯವಾಗಿ ಆಕೆಯನ್ನು ನಲುಗಿಸುವಂತೆ ನಡೆದುಕೊಳ್ಳಬೇಕೆಂದು ಯಾವ ರಾತ್ರಿಯೂ ನನಗೆ ಅನ್ನಿಸಿರಲಿಲ್ಲ. ಮುಟ್ಟಿದರೆ ಎಲ್ಲಿ ಮುದುಡಿಹೋಗುತ್ತಾಳೋ ಎಂಬಂಥ ಸುಕೋಮಲೆಯನ್ನು ನಾನಾದರೂ ಹೇಗೆ ತುಳಿದು ಹಾಕಲಿ? ಸಿದ್ಧಾರ್ಥ ಹುಟ್ಟಲು ಒಂದಷ್ಟು ತಿಂಗಳುಗಳ ಮುನ್ನ ಒಂದು ರಾತ್ರಿ... ಮಧ್ಯರಾತ್ರಿ ದಿಢೀರನೆ ಚೀರಿ ಎದ್ದು ಕೂತಳು. ನಾನು ಗಾಬರಿಗೊಂಡು ಏನಾಯಿತು ಏನಾಯಿತು ಎಂದು ತಲೆ ಸವರುತ್ತಾ, ಬಂಗಾರದ ಮಿಳ್ಳೆಯಿಂದ ನೀರು ಕುಡಿಸಿದೆ. ಒಂದು ಕನಸು ಬಿತ್ತು ಎಂದಳು ಆಕೆ. ಎಂಥ ಕನಸು, ಒಳ್ಳೆ ಕನಸೋ, ಕೆಟ್ಟ ಕನಸೋ... ನೀನು ಚೀರಿ ಎದ್ದದ್ದನ್ನು ನೋಡಿದರೆ ಕೆಟ್ಟ ಕನಸೇ ಇರಬೇಕು ಎಂದೆ ನಾನು. ಆದರೆ ಒಂದು ರೀತಿಯ ಸ್ನಿಗ್ಧಭಾವ ನೋಡಿ ಇರಲಿಕ್ಕಿಲ್ಲವೆಂದುಕೊಂಡು, ಬೆಳಗ್ಗೆ ಪಂಡಿತರನ್ನು ಕರೆದು ಆ ಕನಸಿನ ಅರ್ಥವೇನೆಂದು ಕೇಳಿದರಾಯಿತು ಬಿಡು ಎಂದು ಸಮಾಧಾನ ಮಾಡಿ ಮಲಗಿಸಿದೆ. ಆಕೆಗೆ ನಿದ್ದೆ ಬರಲೊಲ್ಲದು. ನನ್ನ ಎದೆಯ ಮೇಲೆ ಆಕೆಯ ತಲೆಯನ್ನಿರಿಸಿಕೊಂಡು, 'ಎಂಥ ಕನಸೆಂದು ಕೇಳಬಹುದೇ' ಎಂದವನು, 'ನೀನು ಭಯ ಬೀಳುತ್ತೀಯೆಂದರೆ ಅಡ್ಡಿಯಿಲ್ಲ, ಬೆಳಗ್ಗೆ ಹೇಳುವಿಯಂತೆ, ಈಗ ಸುಮ್ಮನೆ ಮಲಗಿಕೋ. ಅದರ ಬಗ್ಗೆಯೇ ಯೋಚಿಸಬೇಡ, ಆಯಿತೇ' ಎಂದೆ. ಆದರೆ ಆಕೆ ಆ ಕನಸಿನಿಂದ ವಿಮುಖಳಾಗದೇ ಅದನ್ನೇ ಮೆಲುಕು ಹಾಕುತ್ತಿದ್ದಳು. ಅವಳ ಮುಖದಲ್ಲಿ ಭಯದ ಬದಲು ಮಂದಹಾಸವಿತ್ತು, ಪ್ರಸನ್ನತೆಯಿತ್ತು.

'ರಾತ್ರಿ ನಾನು ಸ್ವಲ್ಪ ಹೆಚ್ಚೇ ಒರಟಾಗಿ ನಡೆದುಕೊಂಡೆನಲ್ಲ, ಅದಕ್ಕೆ ಭಯವಾಗಿರಬೇಕು ಬಿಡು. ಇನ್ನೆಂದೂ ಹಾಗೆ ನಡೆದುಕೊಳ್ಳುವುದಿಲ್ಲ,



